# ಈರುಳ್ಳಿ

ಇಂದು ಭಾರತೀಯರಿಗೆ ಅತ್ಯಂತ ಪೂಜನೀಯವೂ ಪ್ರಿಯವೂ ಆದ ಅನೇಕ ವಸ್ತುಗಳು ಆದಿಕಾಲದಲ್ಲಿ ನಾನಾ ಮಾರ್ಗಗಳಲ್ಲಿ, ನಾನಾ ವಿಧಗಳಲ್ಲಿ ಭಾರತಕ್ಕೆ ಬಂದು ನೆಲೆ ನಿಂತಿರುವಂಥವು. ಎಲೆ ಅಡಿಕೆ, ತೆಂಗು, ಸಾಮ್ರಾಣಿ, ಸೀರೆ, ಪಂಚೆ ಮುಂತಾದ ವಸ್ತುಗಳು ಮೂಲತಃ ನಮ್ಮ ನೆಲದವಲ್ಲ ಎಂದುಕೊಂಡಾಗ ಕೆಲವರಿಗೆ ಆಶ್ಚರ್ಯವಾಗುವುದು ಸಹಜವೇ! ಮತ್ತೆ ಕೆಲವರಲ್ಲಿ ಅವುಗಳ ಮೇಲೆ ಅತೀವ ಭಕ್ತಿ ಇರುವುದರಿಂದ ಸಸ್ಯವಿಜ್ಞಾನಿಗಳು ಮತ್ತು ಚರಿತ್ರಕಾರರು ಸುಳ್ಳು ಹೇಳುತ್ತಿದ್ದಾರೆಂದು ಎಗರಿ ಬೀಳುವುದೂ ಉಂಟು. ಕನ್ನಡ ನೆಲದ ಇಂದಿನ ಮುಖ್ಯ ಆಹಾರಗಳಾದ ರಾಗಿ– ಜೋಳಗಳು ಕೂಡ ಹೊರಗಿನಿಂದ ಬಂದು ನೆಲೆ ನಿಂತ ಧಾನ್ಯಗಳು. ಖಂಡಾಂತರಗಳ ಸ್ಥಿತ್ಯಂತರದ ಸಮಯದಲ್ಲಿ ಆಫ್ರಿಕಾದಿಂದ ಸೀಳಿ ಹೊರ ಬಂದ ಭೂಮಿಯ ಜೊತೆ ರಾಗಿ ಭಾರತಕ್ಕೆ ಬಂದಿರಬಹುದು ಅಥವಾ ಪುರಾತನ ಕರಿಯ ಆಫ್ರಿಕನ್ನರು ಭಾರತಕ್ಕೆ ವಲಸೆ ಬರುವಾಗ ತನ್ನೊಡನೆ ರಾಗಿಯನ್ನು ತಂದಿರಬಹುದು ಎಂಬ ವಾದವೂ ಇದೆ. ಅದೇ ರೀತಿ ಇಂದು ಭಾರತೀಯರ ಅಡುಗೆ ಮನೆಯ ಅನಿವಾರ್ಯ ತರಕಾರಿ ಹಾಗೂ ಪ್ರಿಯ ಖಾದ್ಯಗಳಾದ ಈರುಳ್ಳಿ–ಬೆಳ್ಳುಳ್ಳಿಗಳೂ ಹೊರ ದೇಶದಿಂದಲೇ ಬಂದಿರುವಂಥವೆಂದು ಸಸ್ಯವಿಜ್ಞಾನಿ ಬಿ.ಜಿ.ಎಲ್. ಸ್ವಾಮಿ ತಿಳಿಸುತ್ತಾರೆ.

ಭಾರತದ ವೈದಿಕೇತರ ಸಮುದಾಯಗಳಲ್ಲಿ ಈರುಳ್ಳಿ ಅತ್ಯಂತ ಜನಪ್ರಿಯ ಖಾದ್ಯ. ಅದನ್ನು ಬಳಸದೆ ಯಾವುದೇ ಬಗೆಯ ಅಡುಗೆಯನ್ನು ಅವರು ಕಲ್ಪಿಸಿಕೊಳ್ಳಲಾರರು. ನಮ್ಮ ಉತ್ತರ ಕರ್ನಾಟಕದ ಜನತೆಗೆ ಜೋಳದ ರೊಟ್ಟಿಯ ಜೊತೆಗೆ ಒಂದು ಈರುಳ್ಳಿ ಇದ್ದರೆ ಪರಮಾನಂದ! ಅವರ ಊಟದ ಬಹುಪ್ರಿಯ ನಂಚಿಕೆಯ ವಸ್ತು ಅದು. ಮಾಂಸಾಹಾರಿಗಳಿಗಂತು ಈರುಳ್ಳಿ, ಬೆಳ್ಳುಳ್ಳಿಗಳಿಲ್ಲದೆ ಬದುಕು ಮುಂದಕ್ಕೆ ಹೋಗದು. ಹೀಗಾಗಿ ಇಂದು ಅದು ಭಾರತೀಯರ ಆಹಾರ ರುಚಿ– ಅಭಿರುಚಿಗಳಲ್ಲಿ ಬೆರೆತು ಹೋಗಿದೆ; ಅನೇಕ ವೈವಿಧ್ಯಮಯ ಆಹಾರಗಳ ತಯಾರಿಕೆಗೆ ಕಾರಣವಾಗಿದೆ.

ಅದರೂ ಅಲ್ಲೋ ಇಲ್ಲೋ ಅಪರೂಪವಾಗಿ ವೈದಿಕ ಮನೆಗಳಲ್ಲಿ ಇಂದಿಗೂ ಈರುಳ್ಳಿಯನ್ನು ಬಳಸದೆ ಇರುವುದು ಗೋಚರಿಸುತ್ತದೆ. ಬಹುಪಾಲು ವೈದಿಕರು ಮನೆಯಲ್ಲಿ ಈರುಳ್ಳಿಯನ್ನು ಬಳಸಲು ಅಭ್ಯಾಸ ಮಾಡಿಕೊಂಡಿದ್ದಾರೆ. ಕಟ್ಟಾ ಸಂಪ್ರದಾಯವಾದಿಗಳ ಮನೆಯಲ್ಲಿ ಅದಕ್ಕೆ ಸ್ಥಳ ನೀಡದಿದ್ದಾಗ ಹೊರಗೆ ತಿನ್ನುವವರ ಸಂಖ್ಯೆಗೇನೂ ಕಡಿಮೆಯಿಲ್ಲ!

ವೈದಿಕ ಸಂಪ್ರದಾಯಸ್ಥ ಆಹಾರ ಪದ್ಧತಿಯಲ್ಲಿ ಈರುಳ್ಳಿ ಬೆಳ್ಳುಳ್ಳಿಗಳು ಪ್ರವೇಶ ಮಾಡದಿರಲು ಕಾರಣ– ಅವು ಹೊರಗಿನಿಂದ ಬಂದ ವಿದೇಶಿ ಸರಕುಗಳೇ ಎಂಬುದಿರಬೇಕು. ಜೊತೆಗೆ ಅವು ಸೂಸುವ ವಾಸನೆಯೂ ಕಾರಣವಿರಬಹುದು. ವಿದೇಶಿ ಮೂಲಗಳಿಂದ ಬಂದ ಎಲೆ, ಅಡಿಕೆ, ತೆಂಗು ಮುಂತಾದ ಪದಾರ್ಥಗಳನ್ನು ಪ್ರೀತಿಯಿಂದ ಅಪ್ಪಿಕೊಂಡ ಈ ಜನ, ಚರಿತ್ರೆಯಿಂದ ವರ್ತಮಾನದ ಕಾಲದವರೆಗೆ ಈರುಳ್ಳಿ ಬೆಳ್ಳುಳ್ಳಿಗಳ ಬಗ್ಗೆ ಅಸಹನೆ ತೋರುತ್ತಲೇ ಬಂದಿದ್ದಾರೆ. ಇವುಗಳ ಆಧಾರದ ಮೇಲೆ ಅವೈದಿಕ ಆಹಾರ ಪದ್ಧತಿಯ ಬಗ್ಗೆ ತಿರಸ್ಕಾರದಿಂದ ನೋಡುವ ಮನಸ್ಥಿತಿಯು ಬೆಳೆದದ್ದು ಸುಳ್ಳಲ್ಲವೆಂಬುದನ್ನು ಬಸವಣ್ಣನ ಕಾಲದಲ್ಲಿ ನಡೆದ ಒಂದು ಘಟನೆಯನ್ನು ಅವಲೋಕಿಸಬಹುದು:

ಕಲ್ಯಾಣದ ಬಸವಣ್ಣನ ಮನೆಗೆ ಕಿನ್ನರಿ ಬೊಮ್ಮಯ್ಯನೆಂಬ ಶರಣನು ಬಂದು, ತನಗೆ ಈರುಳ್ಳಿಯನ್ನು ಬಳಸಿ ಇಷ್ಟವಾದ ಅಡುಗೆ ಮಾಡಿ ಬಡಿಸಲು ಏರುತ್ತಾನೆ. ಅದರಂತೆ ಅಡುಗೆಯವರು ಈರುಳ್ಳಿಯನ್ನು ಹೆಚ್ಚಲು ಪ್ರಾರಂಭಿಸುತ್ತಾರೆ. ಆದರೆ ಅಲ್ಲಿಗೆ ಬಂದ ಬಸವಣ್ಣ ಈರುಳ್ಳಿಯ ಹಸಿವಾಸನೆಗೆ ಹೇಸಿ ಅದನ್ನು ಅಮೇಧ್ಯವೆಂದು ಜರಿದುಬಿಡುತ್ತಾನೆ! ಈ ಮಾತನ್ನು ಕೇಳಿಸಿಕೊಂಡ ಕಿನ್ನರಿ ಬೊಮ್ಮಯ್ಯನು ನೊಂದು ಬಸವನ ಮಹಾಮನೆಯನ್ನು ತೊರೆದು ಕಲ್ಯಾಣದಿಂದ ಹೊರ ನಡೆಯುತ್ತಾನೆ. ಮೂಲತಃ ವೈದಿಕ ಶೈವ ಬ್ರಾಹ್ಮಣ ಆಹಾರ ಪದ್ಧತಿಯಲ್ಲಿ ಬೆಳೆದಿದ್ದ ಬಸವಣ್ಣನಿಗೆ ಈರುಳ್ಳಿ ಪಥ್ಯವಾಗುತ್ತಿರಲಿಲ್ಲ. ಆ ಮೂಲ ವಾಸನೆ ಅವನ ಬಾಯಿಂದ 'ಅಮೇಧ್ಯ'ವೆಂಬ ಪದ ಪ್ರಯೋಗ ಮಾಡಿಸಿತು. ತನ್ನ ತಪ್ಪಿನ ಅರಿವು ಮಾಡಿಕೊಂಡ ಬಸವಣ್ಣ ಈರುಳ್ಳಿ ಗಾಡಿಗಳ ಮೆರವಣಿಗೆಯ ಮೂಲಕ ಕಿನ್ನರಿ ಬೊಮ್ಮಯ್ಯನ ಕ್ಷಮೆ ಯಾಚಿಸಿ ಮಹಾಮನೆಗೆ ಕರೆತರುತ್ತಾನೆ (ಶೂನ್ಯ ಸಂಪಾದನೆ).

ಕಳೆದ ಶತಮಾನದ ಎಂಬತ್ತರ ದಶಕದ ಆದಿಯಲ್ಲಿ ಈರುಳ್ಳಿ ಬೆಲೆ ಗಗನಕ್ಕೇರಿದ ಕಾರಣದಿಂದ ಸರ್ಕಾರಗಳೇ ಅಲ್ಲಾಡಿ ಉರುಳಿದ ಉದಾಹರಣೆ ನಮ್ಮಲ್ಲಿದೆ. ಈಗ ಮತ್ತೆ ದೇಶದಲ್ಲಿ ಈರುಳ್ಳಿಯ ಹಾಹಾಕಾರವೆದ್ದಿದೆ; ಗ್ರಾಹಕ ಅದಕ್ಕಾಗಿ ಪರಿತಪಿಸಿ ಕಣ್ಣೀರಿಡುತ್ತಿದ್ದಾನೆ. ಈ ಈರುಳ್ಳಿ ಮಹಿಮೆಯ ರೂಪ ಹೇಗೆ ವಿನ್ಯಾಸಗೊಳ್ಳುವುದೋ ಕಾದು ನೋಡಬೇಕು.

■ ಶಿಕಾಕು

## ಮಾತೇ ಮುತ್ತು

★ ನಾವು ಮಾಡುವ ಕಾರ್ಯ ಸರಿಯೇ ಎನ್ನುವುದನ್ನು ತಿಳಿಯಲು ಅದನ್ನು ತಾಳೆ ಮಾಡಿ ಪರೀಕ್ಷಿಸಬೇಕು.

–ವಿನೋಬಾ ಭಾವೆ

★ ಕ್ರೋಧದ ಕೈಯಲ್ಲಿ ಬುದ್ಧಿ ಕೊಟ್ಟವರು ಇಹ–ಪರಗಳನ್ನು ಕೆಡಿಸುವಂಥ ಕೆಟ್ಟ ಕಾರ್ಯ ಮಾಡುತ್ತಾರೆ. ಕ್ರೋಧದಿಂದ ರಕ್ತದೊತ್ತಡ, ಕ್ಯಾನ್ಸರ್, ಡಯಾಬಿಟಿಸ್ ವ್ಯಾಧಿಗಳು ಕಾಡುತ್ತವೆ ಎನ್ನಲಾಗುತ್ತದೆ. ಆದ್ದರಿಂದ ಶಾಂತಿ ಸಹನೆಯ ಮೂಲಕ ಕ್ರೋಧವನ್ನು ಗೆಲ್ಲುವುದೇ ಮುಖ್ಯ ಧ್ಯೇಯವಾಗಬೇಕು.

–ವೀರೇಂದ್ರ ಹೆಗ್ಗಡೆ

★ ನಾನು ಎಂದೂ ಅಧಿಕಾರವನ್ನು ಕೇಳುವುದಿಲ್ಲ; ಅದು ಬಂದರೆ ತಿರಸ್ಕರಿಸುವುದಿಲ್ಲ; ಎಂದೂ ರಾಜೀನಾಮೆ ಕೊಡುವುದಿಲ್ಲ.

–ಬೆಂಜಮಿನ್ ಫ್ರಾಂಕ್‌ಲಿನ್

★ ದೊಡ್ಡ ಅನ್ಯಾಯಕ್ಕೆ ಬಲಿಯಾಗುವ ಹೆದರಿಕೆ ಉಳ್ಳವನು, ಅದಕ್ಕೂ ಕಡಿಮೆ ಅನ್ಯಾಯವನ್ನೇ ಅನುಗ್ರಹವೆಂದು ಸ್ವೀಕರಿಸುತ್ತಾನೆ.

–ಕಾರ್ಲೈಲ್

★ ಅಪರಿಚಿತರ ಬಗ್ಗೆ ವಿನಯ, ವಿಶ್ವಾಸ ತೋರಿಸುವವನೇ ವಿಶ್ವಪ್ರಜೆ.

–ಫ್ರಾನ್ಸಿಸ್ ಬೇಕನ್

★ ಶ್ರೀಮಂತರು ಕಾನೂನುಗಳ ಮೇಲೆ ಅಧಿಕಾರ ಚಲಾಯಿಸಿದರೆ, ಕಾನೂನು ಬಡವರ ಮೇಲೆ ಅಧಿಕಾರ ಚಲಾಯಿಸುತ್ತದೆ.

–ಗೋಲ್ಡ್‌ಸ್ಮಿತ್

★ ಸಾರ್ವಜನಿಕ ಅಭಿಪ್ರಾಯ ಸದಾ ಕಾನೂನಿಗಿಂತ ಮೊದಲೇ ರೂಪುಗೊಳ್ಳುತ್ತದೆ.

–ಜಾನ್ ಗಾಲ್ಸ್‌ವರ್ದಿ

★ ಯಾರು ತಮಗೆ ಸಹಾಯ ಮಾಡಿಕೊಳ್ಳುತ್ತಾರೋ ಅಂತಹವರಿಗೆ ದೇವರೂ ಸಹಾಯ ಮಾಡುತ್ತಾನೆ.

–ಈಸೋಪ್

★ ಅದೃಷ್ಟ ತೊರೆ ಆಗಿ ಬಂದರೆ, ದುರದೃಷ್ಟ ಮಹಾನದಿ ಆಗಿ ಬರುತ್ತದೆ.

–ಐರಿಶ್ ಗಾದೆ

★ ಅಧಿಕಾರ ಮುಟ್ಟಿದ್ದನ್ನೆಲ್ಲ ಸಾಂಕ್ರಾಮಿಕ ರೋಗದಂತೆ ಕಲುಷಿತಗೊಳಿಸುತ್ತದೆ.

–ಪಿ.ಬಿ.ಶೆಲ್ಲಿ

★ ಶಕ್ತಿ ಅಡಗಿರುವುದು ರಕ್ಷಿಸಿಕೊಳ್ಳುವುದರಲ್ಲಿ ಅಲ್ಲ, ಎದುರಿಸುವುದರಲ್ಲಿ.

–ಅಡಾಲ್ಫ್ ಹಿಟ್ಲರ್

★ ಸೈನ್ಯಗಳ ಮುನ್ನುಗ್ಗುವಿಕೆಯನ್ನು ತಡೆಯಬಹುದು. ಸಕಾಲದಲ್ಲಿ ಬರುವ 'ವಿಚಾರ'ವನ್ನು ಯಾರೂ ತಡೆಯಲಾರರು.

–ವಿಕ್ಟರ್ ಹ್ಯೂಗೋ

★ ಒಬ್ಬ 'ದಕ್ಷ'ನ ಹಿಂದೆ ಇತರ 'ದಕ್ಷ' ಮಂದಿ ಇದ್ದೇ ಇರುತ್ತಾರೆ.

–ಚೀನಾ ಗಾದೆ

★ 'ಕಿವಿಮಾತು' ಹೇಳಿದರೆ ಅದು ಇಡೀ ಊರಿಗೇ ಕೇಳಿಸುತ್ತದೆ!

–ಸ್ವೀಡಿಷ್ ಗಾದೆ

★ ಅಳತೆ ಮಾಡದೆ ಕತ್ತರಿಸಬೇಡ!

–ಇರಾನಿ ಗಾದೆ